1. ಹುಲಸೂರು ಏಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಾಯಿಗಾಂವ್ ಗ್ರಾಮವು ನೆರೆಯ ಮಹಾರಾಷ್ಟ್ರದ ಗಡಿಭಾಗದಲ್ಲಿದ್ದು ಅಂತರ ರಾಜ್ಯಕ್ಕೆ ಸಂಪರ್ಕವನ್ನು ಕಲ್ಪಿಸುವ ಸಲುವಾಗಿ ಸಾಯಿಗಾಂವ್‌ನಲ್ಲಿ ಸೇತುವ ನಿರ್ಮಾಣ ಕಾರ್ಯವನ್ನು ನಬಾರ್ಡ್ ನೆರವಿನಿಂದ ತೆಗದುಕೊಳ್ಳುವುದಾಗಿ ಕಳದ ಏಧಾನ ಸಭೆಯ ಅಧಿವೇಶನದಲ್ಲಿ ಲೋಕೋಪಯೋಗಿ ಸಚಿವರು ಸದನಕ್ಕೆ ಭರವಸೆಯನ್ನು ನೀಡಿದ್ದುದ್ದು ನಿಜವೇ?

2. ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

3. ಈ ಗ್ರಾಮವು ರಾಜ್ಯದ ಗಡಿಭಾಗದಲ್ಲಿದ್ದು ತೀರ ಹಿಂದುಳಿದ ಪ್ರದೇಶವಾಗಿದ್ದು ಇಲ್ಲಿ ಸೇತುವೆಯನ್ನು ನಿರ್ಮಿಸುವುದರಿಂದ ಅಂತರ ರಾಜ್ಯದ ಸಂಪರ್ಕವನ್ನು ಕಲ್ಪಿಸಲು ಸಹಕಾರಿಯಾಗುವುದರಿಂದ ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ನೆರವಿನಿಂದ ಈ ಗ್ರಾಮದಲ್ಲಿ ಸೇತುವೆ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದೆ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಇಲ್ಲ. ಈ ಸೇತುವೆ ಕಾಮಗಾರಿ ರೂ.7.00 ಕೋಟಿಗೆ ಆರ್.ಐ.ಡಿ.ಎಫ್ 6ರಡಿ ಪ್ರಸ್ತಾಪಿತವಾಗಿದ್ದು ಈ ಯೋಜನೆಯಡಿ ಸಚಿವ ಸಂಪುಟ ಉಪ ಸಮಿತಿಯಿಂದ ಗುರುತಿಸಲಾಗಿರುವುದಿಲ್ಲವೆಂದು ಕಳೆದ ಅಧಿವೇಶನದಲ್ಲಿ ಸದನಕ್ಕೆ ತಿಳಿಸಿದ್ದು ಈ ಬಗ್ಗೆ ಯಾವುದೇ ಭರವಸೆ ನೀಡಲಾಗಿರುವುದಿಲ್ಲ.

2. ಈ ಕಾಮಗಾರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ಲೋಕೋಪಯೋಗಿ ಇಲಾಖೆಯಡಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

3. ಈ ಬಗ್ಗೆ ಪರಿಶೀಲಿಸಲಾಗುವುದು.

ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಮಾರಾಟ.

2942(3666)

ಶ್ರೀ ರಾಮಲಿಂಗಾ ರೆಡ್ಡಿ(ಜಯನಗರ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಉಗ್ರಾಣದಲ್ಲಿರುವ ಸಕ್ಕರೆ ದಾಸ್ತಾನೆಷ್ಟು; ಹಾಗೂ ಇದರ ಮೌಲ್ಯವೆಷ್ಟು?

ಆ) ಈ ಸಕ್ಕರೆಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದೇ ಇರುವ ಕಾರಣಗಳೇನು?

ಇ) ಸಕ್ಕರೆ ಗಿರಣಿಗಳಿಗೆ ಕಬ್ಬು ಪೂರೈಕೆ ಮಾಡಿರುವ ರೈತರಿಗೆ ಹಣ ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆಯನ್ನು ಮಾರಾಟ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಲ್ಲಿ ಇರುವ ದಾಸ್ತಾನಿನ ಪ್ರಮಾಣ ದಿ:30-6-01ರ ಅಂತ್ಯಕ್ಕೆ 14.07 ಲಕ್ಷ ಟನ್ ಇದ್ದು, ಇದರ ಮೌಲ್ಯ ಸುಮಾರು ರೂ.1600.00 ಕೋಟಿ ಆಗಬಹುದು.

ಆ) ಸಕ್ಕರೆ ವಿತರಣೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಅಗತ್ಯ ಸನ್ನಿವೇಶಗಳಲ್ಲಿ ಹೆಚ್ಚಿನ ಸಕ್ಕರೆ ಬಿಡುಗಡೆಗೆ ಕೇಂದ್ರ ಸರ್ಕಾರವನ್ನು ಕೋರಲಾಗುತ್ತದೆ. ಶೇ.15ರಂತೆ ಲೆವಿ ಸಕ್ಕರೆ ದಾಸ್ತಾನನ್ನು ಭಾರತ ಸರ್ಕಾರವು ಆಗಿಂದಾಗ್ಗೆ ನೀಡುವ ಆದೇಶದಂತೆ ಎತ್ತುವಳಿ ಮಾಡಲಾಗುತ್ತದೆ. ಅದೇ ರೀತಿ ಶೇ.85ರಂತೆ ಮುಕ್ತ ಮಾರುಕಟ್ಟೆ ಸಕ್ಕರೆಯನ್ನು ಕೂಡಾ ಕೇಂದ್ರ ಸರ್ಕಾರವು ಕಾಲಾನುಕಾಲಕ್ಕೆ ಮುಕ್ತ ಮಾರಾಟದ ಕೋಟಾದನ್ವಯ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿರುತ್ತದೆ.

ಇ) ಕೆಲವು ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆಯನ್ನು ನಿಗದಿತ ಸಮಯಕ್ಕೆ ಪಾವತಿ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಮಾರಾಟ ಮಾಡಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು ಆ ಪ್ರಕಾರ ರಾಜ್ಯದಿಂದ ಸಕ್ಕರೆ ವಿದೇಶಿ ಮಾರುಕಟ್ಟೆಗೆ ರಫ್ತಾಗುತ್ತಿದೆ.